**ದಿನಾಂಕ: 17-10-2025ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

1. ಮೃತ ನಬಿಸಾಬ ನನ್ನ ಗಂಡನಾಗಬೇಕು. 5ನೇ ಅರ್ಜಿದಾರರು ಮೃತ ನಬಿಸಾಬನಿಗೆ ತಾಯಿ ಆಗಬೇಕು. 2 ರಿಂದ 4ನೇ ಅರ್ಜಿದಾರರು ಮೃತ ನಬಿಸಾಬನ ಮಕ್ಕಳು ಇರುತ್ತಾರೆ. ಅಪಘಾತವಾದ ದಿನ ಮೃತ ನಬಿಸಾಬನಿಗೆ ಎಷ್ಟು ವರ್ಷ ವಯಸ್ಸು ಇತ್ತು ಎಂದರೆ ಮಕ್ಕಳು ಸಣ್ಣವರಿದ್ದಾರೆ ಎಂದು ಉತ್ತರಿಸುತ್ತಾರೆ. ಮೃತ ನಬಿಸಾಬನಿಗೆ ಸಂಬಂಧಪಟ್ಟ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಅಪಘಾತವಾದ ದಿನ ನಬಿಸಾಬನ ವಯಸ್ಸು 45 ರಿಂದ 50 ವರ್ಷ ಆಗಿತ್ತು ಎಂದರೆ ಆಧಾರ್ ಕಾರ್ಡ್ ನೋಡಿದರೆ ಗೊತ್ತಾಗುತ್ತದೆ ಎಂದು ಉತ್ತರಿಸುತ್ತಾರೆ. ನಬಿಸಾಬ ಕೂಲಿ ಕೆಲಸ ಮಾಡುತ್ತಿದ್ದರು. ನಬಿಸಾಬನ ಹೆಸರಿನಲ್ಲಿ ಹೊಲ ಏನಾದರೂ ಇತ್ತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಬಿಸಾಬ್ ತಿಂಗಳಿಗೆ 25 ಸಾವಿರ ರೂಪಾಯಿ ಗಳಿಸುತ್ತಿದ್ದರು. ನಬಿಸಾಬ್ ಕೂಲಿ ಕೆಲಸ ಮಾಡಿ ತಿಂಗಳಿಗೆ 25 ಸಾವಿರ ಗಳಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದರ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ದಿನಾಲು ಸಾವಿರ ರೂಪಾಯಿ ಗಳಿಸುತ್ತಿದ್ದರು ಎಂದು ಉತ್ತರಿಸುತ್ತಾರೆ. ದಿನಾಲೂ ಸಾವಿರ ರೂಪಾಯಿ ಗಳಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಅಪಘಾತವಾದ ಸಮಯದಲ್ಲಿ ಅಪಘಾತವಾದ ಸ್ಥಳದಲ್ಲಿ ನೀವು ಇದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಅಪಘಾತಾವಾದ ವಿಷಯವನ್ನು ಮಹಾಂತನಳ್ಳಿ ದತ್ತಪ್ಪ ತಿಳಿಸಿರುತ್ತಾರೆ. ಅಪಘಾತ ಯಾವ ರೀತಿ ಆಯಿತು ಎಂದು ಹೇಳಿದರು ಎಂದರೆ ಟ್ರ್ಯಾಕ್ಟರ್ ಇತ್ತು ಎಂದು ಉತ್ತರಿಸುತ್ತಾರೆ. ಆ ದಿನ ನಬಿಸಾಬ್ ಶಹಾಬಾದಿನಿಂದ ಕಲ್ಲು

ತಗೆದುಕೊಂಡು ಹರವಾಳಗೆ ಹೋಗುತ್ತಿದ್ದರು. ಸದರಿ ಟ್ರ್ಯಾಕ್ಟರಿನಲ್ಲಿ ಎಷ್ಟು ಜನರು ಇದ್ದರು ಎಂದರೆ ನನ್ನ ಗಂಡ ಮತ್ತು ಇನ್ನೊಬ್ಬ ಮತ್ತು ಟ್ರ್ಯಾಕ್ಟರ್ ಚಾಲಕ ಇದ್ದನು. ದೂರಿನ ಪ್ರಕಾರ ಸದರಿ ಟ್ರ್ಯಾಕ್ಟರಿನಲ್ಲಿ ನಿಮ್ಮ ಗಂಡನನ್ನು ಬಿಟ್ಟು ಇನ್ನು ಮೂರು ಜನರು ಇದ್ದರು ಒಟ್ಟು ನಾಲ್ಕು ಜನರು ಇದ್ದರು ಎಂದರೆ ಹೌದು ಎಂದು ಉತ್ತರಿಸುತ್ತಾರೆ.

3. ಅಪಘಾತ ಯಾವ ರೀತಿ ಆಗಿದೆ ಎಂದರೆ ಟ್ರ್ಯಾಕ್ಟರ್ ಪಲ್ಟಿಯಾಗಿ ಅಪಘಾತವಾಗಿರುತ್ತದೆ. ನಿಮ್ಮ ಗಂಡ ಮತ್ತು ಇನ್ನು ನಾಲ್ಕು ಜನ ಟ್ರಾಲಿಯಲ್ಲಿ ಕುಳಿತಿದ್ದರು ಎಂದರೆ ಸರಿ. ಸದರಿ ಟ್ರಾಲಿಗೆ ಯಾವುದೇ ಇನ್ಸುರೆನ್ಸ್ ಮತ್ತು ರಿಜಿಸ್ಟ್ರೇಷನ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ್ ಚಾಲಕನಿಗೆ ಲೈಸೆನ್ಸ್ ಇಲ್ಲ ಎಂದು ಪೊಲೀಸರು ಆತನ ಮೇಲೆ ಕೇಸು ಮಾಡಿದ್ದರು ಎಂದರೆ ಇನ್ಸುರೆನ್ಸ್ ಬರುತ್ತದೆ ಎಂದು ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಟ್ರ್ಯಾಕ್ಟರ್ ಮಾಲೀಕನು ಅದರ ಚಾಲಕನಿಗೆ ಲೈಸೆನ್ಸ್ ಇಲ್ಲ ಎನ್ನುವ ವಿಷಯ ಗೊತಿತದ್ದರೂ ಸಹ ಸದರಿ ಟ್ರ್ಯಾಕ್ಟರನ್ನು ಚಾಲನೆ ಮಾಡಲು ಕೊಟ್ಟಿದ್ದರಿಂದ 2ನೇ ಎದುರುದಾರರು ಪರಿಹಾರವನ್ನು ಕೊಡಲು ಬಾದ್ಯಸ್ಥರಲ್ಲ ಟ್ರ್ಯಾಕ್ಟರ್ ಮಾಲೀಕರು ಪರಿಹಾರ ಹಣ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಚಾಲಕನು ಪಾಲಿಸಿಯ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ 2ನೇ ಎದುರುದಾರರ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ.

4. ಅಪಘಾತವಾದ ದಿನ ನನ್ನ ಗಂಡ ಅಪಘಾತವಾದ ಸ್ಥಳದಲ್ಲೇ ಮೃತಪಟ್ಟಿರುತ್ತಾನೆ. ನನ್ನ ಗಂಡನಿಗೆ ಕಲ್ಬುರ್ಗಿಯ ಜಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಪಘಾತವಾದ ಮರುದಿನ ದೂರನ್ನು ನೀಡಿದ್ದೀರಿ ಎಂದರೆ ಸರಿ. ಯಾವುದೇ ಆಧಾರ ಇಲ್ಲದೇ ಪರಿಹಾರ ದನವನ್ನು ಅಂದಾಜಿನ ಮೇಲೆ ಹಾಕಿದ್ದೀರಿ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ